## ಎಸ್‌ಬಿಐ ಲೈಫ್ - ಗ್ರಾಮೀಣ ಬಿಮಾ ಏಕೆ ಬೇಕು?

ಪ್ರತಿಯೊಂದು ಕ್ಷಣವೂ ಸುರಕ್ಷಿತವಾಗಿದೆ ಎಂದು ಅನ್ನಿಸಿದಾಗ ಜೀವನವು ಹೆಚ್ಚು ಆನಂದದಾಯಕವಾಗಿರುತ್ತದೆ ಎಂಬ ಭಾವನೆ ಉಂಟಾಗುತ್ತದೆ. ಈಗ, ಎಸ್‌ಬಿಐ ಲೈಫ್ - ಗ್ರಾಮೀಣ ಬಿಮಾದೊಂದಿಗೆ ಪ್ರತಿಯೊಂದು ಹಂತದಲ್ಲೂ ನೀವು ಮತ್ತು ನಿಮ್ಮ ಕುಟುಂಬದವರು, ಇಬ್ಬರೂ ಆರ್ಥಿಕವಾಗಿ ಸ್ವತಂತ್ರರಾಗಿರುತ್ತೀರಿ ಎಂದು ಖಾತ್ರಿಮಾಡಿಕೊಳ್ಳಬಹುದಾಗಿದ್ದು ಇದು ಒಂದು ಸಲದ ಪಾವತಿಯಲ್ಲಿ ಲೈಫ್ ಕವರ್ ಒದಗಿಸುತ್ತದೆ. ಎಸ್‌ಬಿಐ ಲೈಫ್ - ಗ್ರಾಮೀಣ ಬಿಮಾವು ಒಂದು ವ್ಯಕ್ತಿಗತ, ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ಮೈಕ್ರೊಇನ್‌ಶೂರೆನ್ಸ್ ಲೈಫ್ ಇನ್‌ಶೂರೆನ್ಸ್ ಪ್ಯೂರ್ ರಿಸ್ಕ್ ಪ್ರೀಮಿಯಮ್ ಉತ್ಪನ್ನವಾಗಿದೆ.

## ಪ್ರಮುಖ ವಿಶೇಷತೆಗಳು

- **ಕೈಗೆಟಕುವ ಬೆಲೆಯಲ್ಲಿ ಸಂರಕ್ಷಣೆ :** ನೀವು ಪಾವತಿಸಬಹುದಾದ ಕೈಗೆಟಕುವ ಪ್ರೀಮಿಯಮ್ ಅನ್ನು ಆಯ್ಕೆ ಮಾಡಿರಿ; ಪ್ರೀಮಿಯಮ್‌ನ ಆಧಾರದಲ್ಲಿ ಅದಕ್ಕೆ ಅನುಗುಣವಾಗಿ ನಿಮ್ಮ ಜೀವ ವಿಮಾ ಸುರಕ್ಷೆಯನ್ನು ನಿರ್ಧರಿಸಲಾಗುತ್ತದೆ.
- **ತಕ್ಷಣ ಪ್ರೊಸೆಸಿಂಗ್ :** ವೈದ್ಯಕೀಯ ತಪಾಸಣೆಯ ಅವಶ್ಯಕತೆ ಇಲ್ಲ
- **ಸುಲಭ ದಾಖಲುಗೊಳ್ಳುವಿಕೆ :** ಸರಳೀಕೃತ ಪ್ರಶ್ನಾವಳಿಯ ಆಧಾರದಲ್ಲಿ ದಾಖಲುಗೊಳ್ಳುವಿಕೆ
- **ಸಿಂಗಲ್ ಪ್ರೀಮಿಯಮ್ :** ಕೇವಲ ಒಮ್ಮೆ ಮಾತ್ರ ಪಾವತಿಸುವ ಅನುಕೂಲತೆ

## ವಿವರಣೆ

| **ವಯಸ್ಸು** (ವರ್ಷಗಳಲ್ಲಿ) | **ಪ್ರೀಮಿಯಮ್ (ರೂ.ಗಳಲ್ಲಿ)** (ಅನ್ವಯವಾಗುವ ಕರಗಳನ್ನು ಒಳಗೊಂಡು) | **ಪಾಲಿಸಿ ಅವಧಿ** (ವರ್ಷಗಳಲ್ಲಿ) | **ಮೂಲ ವಿಮಾ ಮೊತ್ತ ರೂ.ಗಳಲ್ಲಿ)** |
|---|---|---|---|
| 30 ವರ್ಷಗಳು | ₹800 | 5 ವರ್ಷಗಳು | ₹48,000 |




***ಪಾಲಿಸಿ ಕಾಲಾವಧಿಯಲ್ಲಿ ವಿಮೆ ಮಾಡಿಸಿಕೊಂಡವರ ಮೃತ್ಯು ಸಂಭವಿಸಿದ ದುರಾದೃಷ್ಟಕರ ಪ್ರಸಂಗದಲ್ಲಿ, ನಾಮನಿರ್ದೇಶಿತರು ಅಥವಾ ವಾರಸುದಾರರು ವಿಮಾ ಮೊತ್ತವನ್ನು ಏಕಗಂಟಿನಲ್ಲಿ ಪಡೆಯಲಿದ್ದು ಇದರಲ್ಲಿ ಮೃತ್ಯುವಿನಲ್ಲಿನ ವಿಮಾ ಮೊತ್ತವು ಮೂಲ ವಿಮಾ ಮೊತ್ತ ಅಥವಾ ಸಿಂಗಲ್ ಪ್ರೀಮಿಯಮ್‌ನ 1.25 ಪಟ್ಟು ಇವುಗಳ ಪೈಕಿ ಅಧಿಕ ಇರುವಂತಹದ್ದಾಗಿದೆ.***

***ಈ ಪ್ರಸಂಗದಲ್ಲಿ, ₹48,000ದ ಮೃತ್ಯು ಲಾಭವನ್ನು ಅನ್ವಯವಾಗುವಂತೆ ನಾಮನಿರ್ದೇಶಿತರಿಗೆ ಅಥವಾ ವಾರಸುದಾರರಿಗೆ ಪಾವತಿಸಲಾಗುತ್ತದೆ.***

## ಪ್ಲಾನ್‌ನ ಪಕ್ಷಿನೋಟ

<table>
<tr><td>ಪ್ರವೇಶದಲ್ಲಿ ವಯಸ್ಸು^</td><td>ಕನಿಷ್ಠ: 18 ವರ್ಷಗಳು</td><td>ಗರಿಷ್ಠ: 50 ವರ್ಷಗಳು</td></tr>
<tr><td>ಪಾಲಿಸಿ ಅವಧಿ</td><td colspan="2">5 ವರ್ಷಗಳು</td></tr>
<tr><td>ಪ್ರೀಮಿಯಮ್ ಪಾವತಿ ಅವಧಿ</td><td colspan="2">ಪಾಲಿಸಿ ಆರಂಭವಾಗುವಾಗ ಒಂದು ಸಲದ ಪಾವತಿ</td></tr>
<tr><td>ಸಿಂಗಲ್ ಪ್ರೀಮಿಯಮ್ ಮೊತ್ತಗಳು</td><td colspan="2">ಕನಿಷ್ಠ: ₹300 ಗರಿಷ್ಠ: ₹2,000<br>ಪ್ರೀಮಿಯಮ್ ಮೊತ್ತಗಳು ₹100ರ ಗುಣಾಕಾರದಲ್ಲಿರುತ್ತವೆ</td></tr>
<tr><td>ಪ್ರೀಮಿಯಮ್‌ನ ಆವರ್ತನ</td><td colspan="2">ಸಿಂಗಲ್ ಪ್ರೀಮಿಯಮ್</td></tr>
<tr><td rowspan="5">ಮೂಲ ವಿಮಾ ಮೊತ್ತ</td><td>ಕನಿಷ್ಠ: ₹10,000<br>ವಿಮಾ ಮೊತ್ತವು ಈ ಕೆಳಗಿನಂತಿರುತ್ತದೆ :</td><td>ಗರಿಷ್ಠ: ₹50,000*</td></tr>
<tr><td>ವಯೋ ಘಟಕ</td><td>ಪಾವತಿಸಲಾದ ಸಿಂಗಲ್ ಪ್ರೀಮಿಯಮ್‌ನ ಗುಣಾಕಾರದಂತೆ ಮೂಲ ವಿಮಾ ಮೊತ್ತ</td></tr>
<tr><td>18 - 39</td><td>60 ಪಟ್ಟುಗಳು</td></tr>
<tr><td>40 - 44</td><td>40 ಪಟ್ಟುಗಳು</td></tr>
<tr><td>45 - 50</td><td>25 ಪಟ್ಟುಗಳು</td></tr>
<tr><td>ಸರಂಡರ್</td><td colspan="2">ಕವರ್‌ನ ಮೊದಲನೆಯ ವರ್ಷದ ನಂತರ ಮತ್ತು ಕವರ್‌ನ ಕೊನೆಯ ವರ್ಷದ ಮೊದಲು ಸರಂಡರ್‌ಗೆ ಅನುವು ಮಾಡಲಾಗುತ್ತದೆ. ಪಾವತಿಸಲಾಗುವ ಸರಂಡರ್ ಮೌಲ್ಯವು ಈ ಕೆಳಗಿನಂತಿದೆ :<br>ಪಾವತಿಸಲಾದ ಸಿಂಗಲ್ ಪ್ರೀಮಿಯಮ್ * 50% * ಮುಗಿಯದಿರುವ ಪಾಲಿಸಿ ಅವಧಿ/ಒಟ್ಟು ಅವಧಿ<br>ಇಲ್ಲಿ ಅವಧಿಯನ್ನು ಪೂರ್ಣ ತಿಂಗಳುಗಳಂತೆ ಗಣನೆ ಮಾಡಲಾಗುತ್ತದೆ</td></tr>
</table>

^ವಯಸ್ಸಿನ ಎಲ್ಲಾ ವಿವರಗಳು ಹಿಂದಿನ ಜನನ ದಿನಾಂಕದ ಅನುಸಾರ.

*ಈ ಪ್ಲಾನ್‌ನಡಿಯಲ್ಲಿ ಒಟ್ಟು ಮೂಲ ವಿಮಾ ಮೊತ್ತವನ್ನು ಪ್ರತಿ ಒಂದು ಜೀವಕ್ಕೆ ₹50,000ಕ್ಕೆ ಸೀಮಿತಗೊಳಿಸಲಾಗುತ್ತದೆ.

## ರಿಬೇಟ್‌ಗೆ (ಸೋಡಿಗೆ) ನಿಷೇಧ

**ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ವಿಮಾ ಕಾಯ್ದೆ, 1938ರ ಸೆಕ್ಷನ್ 41 ಹೇಳುವುದೇನೆಂದರೆ :**

ಅ) ವಿಮಾ ಸಂಸ್ಥೆಯ ಪ್ರಕಾಶಿತ ವಿವರಣಪತ್ರಗಳಿಗೆ ಅಥವಾ ಕೋಷ್ಟಕಗಳಿಗೆ ಅನುಗುಣವಾಗಿ ಅನುಮತಿ ಇರಬಹುದಾದ ಸೋಡಿಯನ್ನು (ರಿಬೇಟ್) ಹೊರತುಪಡಿಸಿ, ಭಾರತದಲ್ಲಿನ ವ್ಯಕ್ತಿಗಳಿಗೆ ಅಥವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಬಗೆಯ ಆಪತ್ತಿನ ವಿಚಾರದಲ್ಲಿ, ಯಾವುದೇ ವ್ಯಕ್ತಿಯು ಯಾವುದೇ ವ್ಯಕ್ತಿಗೆ ವಿಮೆಯನ್ನು ಪಡೆದುಕೊಳ್ಳಲು ಅಥವಾ ನವೀಕರಿಸಲು ಅಥವಾ ಮುಂದುವರಿಸಲು ಪ್ರಚೋದನೆಯ ರೂಪದಲ್ಲಿ, ನೇರವಾಗಿ ಅಥವಾ ಪರೋಕ್ಷವಾಗಿ, ಪಾವತಿಸಲ್ಪಡಬಹುದಾದ ಕಮಿಷನ್ ಹಣದ ಸಂಪೂರ್ಣ ಅಥವಾ ಭಾಗಶಃ ಯಾವುದೇ ಸೋಡಿಗೆ, ಅಥವಾ ಪಾಲಿಸಿಯಲ್ಲಿ ನಮೂದಿಸಲ್ಪಟ್ಟಿರುವ ಪ್ರೀಮಿಯಮ್‌ನ ಯಾವುದೇ ಸೋಡಿಗೆ ಅನುಮತಿ ಅಥವಾ ಆಸ್ಪದ ನೀಡಕೂಡದು ಮತ್ತು ಒಂದು ಪಾಲಿಸಿಯನ್ನು ಪಡೆದುಕೊಳ್ಳುತ್ತಿರುವ ಅಥವಾ ನವೀಕರಿಸುವ ಅಥವಾ ಮುಂದುವರಿಸುತ್ತಿರುವ ಯಾವುದೇ ವ್ಯಕ್ತಿಯು ಯಾವುದೇ ಸೋಡಿಯನ್ನು ಸ್ವೀಕರಿಸಕೂಡದು.

ಆ) ಈ ಸೆಕ್ಷನ್‌ನ ಪ್ರಾವಧಾನಗಳನ್ನು ಪಾಲಿಸದೇ ಇರುವ ಯಾವುದೇ ವ್ಯಕ್ತಿಯು ದಂಡಕ್ಕೆ ಅರ್ಹನಿದ್ದು ಇದು ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದು.

**Toll-free No.:** 1800 267 9090 | SMS '**LIBERATE**' to 56161 | **Email:** info@sbilife.co.in | **Web:** www.sbilife.co.in
(Between 9.00 am & 9.00 pm)

ಎಸ್‌ಬಿಐ ಲೈಫ್ - ಗ್ರಾಮೀಣ ಬಿಮಾವು ಒಂದು ವ್ಯಕ್ತಿಗತ, ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ಮೈಕ್ರೊಇನ್‌ಶೂರೆನ್ಸ್ ಲೈಫ್ ಇನ್‌ಶೂರೆನ್ಸ್ ಪ್ಯೂರ್ ರಿಸ್ಕ್ ಪ್ರೀಮಿಯಮ್ ಉತ್ಪನ್ನವಾಗಿದೆ.

**ನಕಲಿ/ಮೋಸದ ಕೊಡುಗೆಗಳಿಗೆ ಸಂಬಂಧಿಸಿದ ಫೋನ್ ಕರೆಗಳ ಕುರಿತು ಜಾಗರೂಕರಾಗಿರಿ.**
IRDAI ಇನ್‌ಶೂರೆನ್ಸ್ ಪಾಲಿಸಿಗಳನ್ನು ಮಾರಾಟ ಮಾಡುವುದು, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್ ಇನ್ವೆಸ್ಟ್‌ಮೆಂಟ್ ಮಾಡುವಂತಹ ಕೆಲಸಗಳಲ್ಲಿ ತೊಡಗಿರುವುದಿಲ್ಲ. ಅಂತಹ ಕರೆಗಳು ಬಂದಲ್ಲಿ ಜನರು ಪೊಲೀಸರಿಗೆ ದೂರು ಸಲ್ಲಿಸಬೇಕಾಗಿ ವಿನಂತಿ.

ಅಪಾಯ ಅಂಶಗಳು, ನಿಯಮ ಮತ್ತು ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ಣಗೊಳಿಸುವ ಮೊದಲು ಸೇಲ್ಸ್ ಬ್ರೋಶರನ್ನು ಜಾಗ್ರತೆಯಿಂದ ಓದಿಕೊಳ್ಳಿರಿ. ಈ ಮೇಲೆ ತೋರಿಸಲಾದ ವ್ಯಾಪಾರಿ ಲೋಗೋ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಸೇರಿದೆ ಮತ್ತು ಲೈಸನ್ಸ್ ಅಡಿಯಲ್ಲಿ ಎಸ್‌ಬಿಐ ಲೈಫ್‌ನಿಂದ ಉಪಯೋಗಿಸಲಾಗುತ್ತಿದೆ. ಎಸ್‌ಬಿಐ ಲೈಫ್ ಇನ್‌ಶೂರೆನ್ಸ್ ಕಂ.ಲಿ., ರಿಜಿಸ್ಟರ್ಡ್ ಅಂಡ್ ಕಾರ್ಪೊರೇಟ್ ಆಫೀಸ್: ನಟ್‌ರಾಜ್, ಎಮ್.ವಿ. ರೋಡ್ ಅಂಡ್ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ ಜಂಕ್ಷನ್, ಅಂಧೇರಿ (ಪೂರ್ವ), ಮುಂಬಯಿ-400069. **IRDAI ರಿಜಿಸ್ಟರ್ಡ್ ನಂ. 111** I CIN : L99999MH2000PLC129113.

NW/1F/ver1/02/22/SP/KAN